# ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್-1) ರವರ ನ್ಯಾಯಾಂಗಣದಲ್ಲಿ

## ಎಸ್.ಸಿ. ಸಂಖ್ಯೆಃ 165/2024

ಚಾ.ಸಾ-2 ಫ್ರಾ.ಸಾ-1

ದಿಃ 06.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | ಜೆರಾಲ್ಡ್ |
| ತಂದೆ ಹೆಸರು | ವಿನ್ಸೆಂಟ್ ಪೌಲ್ |
| ವಯಸ್ಸು | 29 ವರ್ಷ |
| ವೃತ್ತಿ | ಖಾಸಗಿ ಕೆಲಸ |
| ವಿಳಾಸ | ಮಡಿವಾಳ, ಬೆಂಗಳೂರು |

ಮುಖ್ಯವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ

ಸುಮಾರು 7-8 ವರ್ಷಗಳ ಹಿಂದೆ ನಾನು ಬೆಳ್ಳಂದೂರು ಪೋಲೀಸ್ ಠಾಣೆಗೆ ಒಂದು ಕೆಲಸದ ನಿಮಿತ್ತವಾಗಿ ಹೋಗಿದ್ದಾಗ ಅಲ್ಲಿ ಪೋಲೀಸರು ಒಂದು ದಾಖಲೆ ಮೇಲೆ ನನ್ನ ಸಹಿಯನ್ನು ಪಡೆದಿದ್ದಾರೆ. ಈಗ ನನಗೆ ಒಂದು ದಾಖಲೆ ತೋರಿಸಲಾಗಿ, ಅದು ಮಾಲು ಅಮಾನತುಪಂಚನಾಮೆ ಎಂದು ಇರುತ್ತದೆ. ಇದರಲ್ಲಿ ನನ್ನ ಸಹಿ ಇದ್ದು, ಸದರಿ ದಾಖಲೆಯನ್ನು ನಿ.ಪಿ-1 ಎಂದು ಹಾಗು ನನ್ನ ರುಜುವನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ನಿ.ಪಿ-1 ರಲ್ಲಿರುವ ಸಂಗತಿಗಳು ನನಗೆ ಗೊತ್ತಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

ಈ ಹಂತದಲ್ಲಿ ಮಾನ್ಯ ಮುಖ್ಯ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯ ಹೇಳಿಕೆ ಹಾಗು ಕಡತದಲ್ಲಿನ ದಾಖಲೆಗಳನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ.

<u>ಪಾಟಿಸವಾಲುಃ ಮಾನ್ಯ ಅಭಿಯೋಜಕರಿಂದಃ</u>

2. ದಿಃ 23.8.2017ರಂದು ಸರ್ಜಾಪುರ ರಸ್ತೆಯಲ್ಲಿರುವ ದೊಡ್ಡಕನ್ನೆಲ್ಲಿಯಿಂದ ಕಾರ್ಮೆಲ್ ಗ್ರಾಮಕ್ಕೆ ಹೋಗುವ ದಾರಿಯಲ್ಲಿ ಕೆಲ ಆಸಾಮಿಗಳು ರಾತ್ರಿ ಸಮಯದಲ್ಲಿ ದರೋಡೆಗೆ ಸಂಚು ಮಾಡುತ್ತಿದ್ದಾರೆ ಎಂದು ನನ್ನನ್ನು ಸದರಿ ಸ್ಥಳಕ್ಕೆ ಚಾ.ಸಾ-1 ರವರು ಬರಮಾಡಿಕೊಂಡರು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಆರೋಪಿತರನ್ನು ಪೋಲೀಸರು ವಶಕ್ಕೆ ಪಡೆದು ಅವರಿಂದ ಎರಡು ದ್ವಿಚಕ್ರ ವಾಹನಗಳು, ಎರಡು ಮರದ ದೊಣ್ಣೆಗಳು, ಒಂದು ಚಿಕ್ಕ ಚಾಕು, ಒಂದು ಕಬ್ಬಿಣದ ರಾಡ್ ಮತ್ತು ಒಂದು ಖಾರದಪುಡಿ ಪೊಟ್ಟಣವನ್ನು ಅಮಾನತುಪಡಿಸಿಕೊಂಡು, ಈ ಬಗ್ಗೆ ನಿ.ಪಿ-1 ರಂತೆ ಅಮಾನತು ಪಂಚನಾಮೆ ಕ್ರಮವನ್ನು ಬರೆದು, ಓದಿ ತಿಳಿಸಿದ ನಂತರ ನಾನು ಸ್ಥಳದಲ್ಲಿಯೆ ಅದರ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ನನಗೆ ಒಂದು ಹೇಳಿಕೆಯನ್ನು ಓದಿ, ತಿಳಿಸಲಾಗಿ, ಅದರಲ್ಲಿ ನಾನು ಈ ಬಗ್ಗೆ ತನಿಖಾಧಿಕಾರಿಗಳ ಮುಂದೆ ವಿಷದವಾಗಿ ಒಂದು ಹೇಳಿಕೆಯನ್ನು ಈಗ ಓದಿ ಹೇಳಿದಂತೆ ನಿ.ಪಿ-2 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ-1 ಮತ್ತು 2 ರಲ್ಲಿನ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಈಗ ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಗಳ ಪರ ವಕೀಲರು ತಮ್ಮ ಪರ ಪಾಟಿಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಎಂ. ಚಂದ್ರಶೇಖರ್ ರೆಡ್ಡಿ)
ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.